# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ DETER ಸಮಿತಿ (WDC) ವಾರ್ಡ್ ಸಂಖ್ಯೆ77-ದತ್ತಾತ್ರೇಯ ದೇವಸ್ಥಾನ ವಾರ್ಡಿನ ದಿನಾಂಕ:19.06.2021 ರಂದು ನಡೆದ ಸಭೆಯ ನಡವಳಿಗಳು

ವಿಷಯ:- ವಾರ್ಡ್ ನಂ.77 ದತ್ತಾತ್ರೇಯ ದೇವಸ್ಥಾನ ವಾರ್ಡ್ DETER ಸಮಿತಿ (WDC) ಸಭೆಯ ನಡುವಳಿ.

ಉಲ್ಲೇಖ:- 1. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ನಂ.RD 158 TNR 2020, ದಿನಾಂಕ:07.05.2021.

>>>***<<<

ಉಲ್ಲೇಖ (1)ರ ಸಭಾ ಸೂಚನಾ ಪತ್ರದ ಅನುಸಾರ ಆದೇಶದ ಅಂಶಗಳನ್ನು ಪರಿಶೀಲಿಸಲು ದಿನಾಂಕ:19.06.2021 ರಂದು, ವಾರ್ಡ್ ಸಂಖ್ಯೆ:77, ದತ್ತಾತ್ರೇಯ ದೇವಸ್ಥಾನ ವಾರ್ಡ್‌ನಲ್ಲಿ ಬೆಳ್ಳಗೆ 12.00 ಗಂಟೆಗೆ ನಡೆದ ಸಭೆಯ ನಡುವಳಿಗಳು.

**ಸಭೆಗೆ ಹಾಜರಿದ್ದವರು**

1) ಶ್ರೀ.ಎಂ.ಆರ್.ಚಂದ್ರಶೇಖರ್, ನೋಡಲ್ ಅಧಿಕಾರಿ, ಉಪ ನಿರ್ದೇಶಕರು (ತೋಟಗಾರಿಕೆ)
2) ಎರಡು ವಲಯದ ಕಂದಾಯ ಅಧಿಕಾರಿಗಳು,
3) ವಾರ್ಡ್ ವಲಯದ ಆರೋಗ್ಯಾಧಿಕಾರಿಗಳು,
4) ಕೋವಿಡ್‌ಗೆ ಸಂಬಂಧ ಪಟ್ಟಂತೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂಧಿಗಳು,

ಸಭೆಯನ್ನು ಪ್ರಾರಂಭಿಸುತ್ತಾ ಸಭೆಗೆ ಹಾಜರಿದ್ದ ಅಧಿಕಾರಿಗಳನ್ನು ಮತ್ತು ವಾರ್ಡ್ ಸಮಿತಿ ಸದಸ್ಯರಿಗೆ ನೋಡಲ್ ಅಧಿಕಾರಿಗಳು ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಿದರು. ಸದರಿ ವಾರ್ಡ್‌ನಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಕಾರ್ಯದರ್ಶಿಗಳು ಸಭೆಗೆ ಗೈರು ಹಾಜರಾಗಿದ್ದರು.

ಶ್ರೀ.ಎಂ.ಆರ್.ಚಂದ್ರಶೇಖರ್, ನೋಡಲ್ ಅಧಿಕಾರಿ, ಉಪ ನಿರ್ದೇಶಕರು (ತೋಟಗಾರಿಕೆ) ಹಾಗೂ ವಾರ್ಡ್ ಸಂಖ್ಯೆ 77 ನೋಡಲ್ ಅಧಿಕಾರಿ ರವರು ವಾರ್ಡ್ ಮಟ್ಟದ ಕೋವಿಡ್ ನಿರ್ವಹಣೆ WDC (ವಾರ್ಡ್ ತಡೆ ಸಮಿತಿ) ವಿಕೇಂದ್ರೀಕೃತ ಚಿಕಿತ್ಸೆಯ ಸದರಿ ನಿರ್ಧಾರ ಮತ್ತು ತುರ್ತು ಪ್ರತಿಕ್ರಿಯೆ ಕೇಂದ್ರ"ದ ರಚನೆ, ಸ್ವರೂಪ, ಕಾರ್ಯವಿಧಾನ, ಅಗತ್ಯತೆ ಹಾಗೂ ಕೋವಿಡ್-19ರ ನಿಯಂತ್ರಣ ಹಾಗೂ ಚಿಕಿತ್ಸೆ ಸಂಬಂಧ ತೆಗೆದುಕೊಳ್ಳಬೇಕಾದ ಕಾರ್ಯಗಳ ಬಗ್ಗೆ ಸಭೆಗೆ ವಿವರವಾಗಿ ಸಭೆಗೆ ತಿಳಿಸಿದರು.

ವಾರ್ಡಿನಲ್ಲಿ ಕೋವಿಡ್-19 ನಿಯಂತ್ರಣ ಸಂಬಂಧ "ಸಮಿತಿಯನ್ನು ರಚಿಸುವ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡುತ್ತಾ ಸ್ವಯಂ ಸೇವಕರನ್ನು ಮತ್ತು ಆಸಕ್ತಿ ಉಳ್ಳ ನಾಗರಿಕರನ್ನು ನಿಯಮಾನುಸಾರ ಗುರುತಿಸಿ ಮತ್ತು ಸದರಿ ರವರಿಗೆ ತರಬೇತಿ ನೀಡುವ ಬಗ್ಗೆ ಕ್ರಮವಹಿಸಬೇಕೆಂದು ತಿಳಿಸಿದರು.

ಸಹಾಯಕ ಕಂದಾಯ ಅಧಿಕಾರಿಗಳಿಗೆ ವಾರ್ಡಿನಲ್ಲಿರುವ ಪರಿಣಾಮಕಾರಿಯಾಗಿ ಕೋವಿಡ್ ನಿರ್ವಹಣೆಯನ್ನು ಮಾಡಬೇಕೆಂದು ತಿಳಿಸಿದರು. ಕಂದಾಯ ಅಧಿಕಾರಿಗಳು ಕೋವಿಡ್ ನಿರ್ವಹಣೆಗೆ ಸಂಬಂಧಿಸಿದಂತೆ ಮತ್ತು ವ್ಯಾಕ್ಸಿನ್‌ಗೆ ಸಂಬಂಧಿಸಿದಂತೆ ಮಾಹಿತಿಯನ್ನು ನೀಡಿದರು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ನೋಡಲ್ ಅಧಿಕಾರಿಗಳು
ವಾರ್ಡ್ ಸಂ.77,
ದತ್ತಾತ್ರೇಯ ದೇವಸ್ಥಾನ
ವಾರ್ಡ್

<u>ಪ್ರತಿಯನ್ನು:-</u>

1. ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಜಂಟಿ ಆಯುಕ್ತರು (ಪಶ್ಚಿಮ) ರವರ ಮಾಹಿತಿಗಾಗಿ ಸಲ್ಲಿಸಿದೆ.